**ದಿನಾಂಕಃ 05.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀಮತಿ.MTR ರವರಿಂದಃ**

1. **Discharge Summary** ಹಾಜರುಪಡಿಸಿದ್ದು ಅದನ್ನು ನಿ.ಪಿ.9 ಎಂದು ಗುರುತಿಸಿದೆ.

2. ಒಟ್ಟು 2 ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.10 ಎಂದು ಗುರುತಿಸಿದೆ.

3. ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 1 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.HCB ರವರಿಂದಃ**

1) ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ನನ್ನ ಮಾವನಾದ ತನಿಗೆವೇಲು ಎಂಬುವವರು ಪೋಲಿಸರಿಗೆ ದೂರನ್ನು ನೀಡಿದ್ದಾರೆ. ಯಾವ ಅಪಘಾತದಲ್ಲಿ ನನಗೆ ಗಾಯಗಳು ಆಗಿವೆಯೋ ಸದರಿ ಅಪಘಾತವನ್ನು ನನ್ನ ಮಾವನು ನೋಡಿರುವುದಿಲ್ಲ.

2) ನಿ.ಪಿ.**1,** ನಿ.ಪಿ.**2** ಮತ್ತು ನಿ.ಪಿ.**7** ದಾಖಲೆಗಳಲ್ಲಿ ರಸ್ತೆಯನ್ನು ದಾಟುತ್ತಿರುವಾಗ ಅಪಘಾತವು ಆಗಿದೆ ಎಂದು ಬರೆಯಲಾಗಿದೆ ಎಂದರೆ ಸುಳ್ಳು. ನಿ.ಪಿ.**4** ರಲ್ಲಿ ಇರುವ ಮಾಹಿತಿಯ ಪ್ರಕಾರ ಅಪಘಾತವು ರಸ್ತೆಯ ಮಧ್ಯದಲ್ಲಿ ಆಗಿದೆ ಎಂದು ಕಂಡು ಬರುತ್ತದೆ ಎಂದರೆ ಸುಳ್ಳು.

3) "ರಸ್ತೆಯನ್ನು ದಾಟುತ್ತಿರುವಾಗ ಅಪಘಾತವು ಆಗಿದೆ" ಎಂಬುದಾಗಿ ಅಂತಿಮ ವರದಿಯಲ್ಲಿ ಪೋಲಿಸರು ತಪ್ಪು ಮಾಹಿತಿಯನ್ನು ನೀಡಿದ್ದಾರೆ ಮತ್ತು ಆ ಕಾರಣದಿಂದ ತಪ್ಪು ಮಾಡಿದ ಪೋಲಿಸ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬುದಾಗಿ ಹೇಳಿ ನಾನು ಪೋಲಿಸ್ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ.

4) ನಿ.ಪಿ.**4** ರಲ್ಲಿ ಇರುವ ಮಾಹಿತಿಗಳ ಪ್ರಕಾರ ಅಪಘಾತವು ಆದಂತಹ ಸ್ಥಳದಲ್ಲಿ ಯಾವುದೇ ಜೀಬ್ರಾ ಕ್ರಾಸ್ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಆದರೆ ಎಲ್ಲಾ ಸಾರ್ವಜನಿಕರು ಅಲ್ಲಿಯೇ ರಸ್ತೆ ದಾಟುತ್ತಾರೆ" ಎಂದು ನುಡಿದಿದ್ದಾರೆ.

5) ದಿಃ **27.10.2024** ರಂದು ಆ ಸ್ಥಳದಲ್ಲಿ ನನ್ನೊಬ್ಬನಿಗೆ ಮಾತ್ರ ಅಪಘಾತವು ಆಗಿದೆ. ಅಪಘಾತವು ಆಗುವುದಕ್ಕಿಂತ ಮೊದಲು ಸದರಿ ಕಾರು

ಬರುವುದನ್ನು ನಾನು ನೋಡಿದೆನು.

6) ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಮತ್ತು ಕಾರಿನ ಚಾಲಕನ ತಪ್ಪಿನಿಂದ ಅಪಘಾತವು ಆಗಿರುವುದಿಲ್ಲ ಎಂದರೆ ಸುಳ್ಳು.

7) ಕೇವಲ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಮತ್ತು ಪೋಲಿಸರು ಮತ್ತು ಮೇಲೆ ಹೇಳಿದ ವಾಹನದ ಮಾಲೀಕರು ಎಲ್ಲರೂ ಸೇರಿಕೊಂಡು ಕಾರಿನ ಚಾಲಕನ ವಿರುದ್ಧ ಸುಳ್ಳು ಪ್ರಕರಣವನ್ನು ಮಾಡಿದ್ದೇವೆ ಎಂದರೆ ಸುಳ್ಳು.

8) ಅಪಘಾತವು ಆದ ನಂತರ ನನ್ನನ್ನು ಯಾರೋ ಸಾರ್ವಜನಿಕರು **St.John** ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ, ಆದರೆ ಆ ವ್ಯಕ್ತಿಯು ಯಾರು ಎಂದು ನನಗೆ ಗೊತ್ತಿಲ್ಲ.

9) **St.John** ಆಸ್ಪತ್ರೆಯಲ್ಲಿ ಇರುವಂತಹ ಎಂ.ಎಲ್.ಸಿ ರಿಜಿಸ್ಟರ್ ಅನ್ನು ತಂದು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಒಂದು ದಿನ ನಾನು **St.John** ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಇದ್ದೆನು. ನಂತರ ನಾನು ದಿನಾಂಕ **28** ರಂದು ವೆಲ್ಲೂರಿನ ಆಸ್ಪತ್ರೆಗೆ ಹೋದೆನು. ಸದರಿ ವೆಲ್ಲೂರಿನ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ಕೊಡುತ್ತಾರೆ ಮತ್ತು

ನನಗೂ ಸಹಾ ಉಚಿತವಾಗಿ ಚಿಕಿತ್ಸೆಯನ್ನು ಕೊಟ್ಟಿದ್ದಾರೆ ಎಂದರೆ ಸರಿ.

10) **St.John** ಆಸ್ಪತ್ರೆಯಲ್ಲಿ ನಾನು **10,350-00** ರೂಪಾಯಿಗಳನ್ನು ಹಣ ಪಾವತಿ ಮಾಡಿದ್ದೇನೆ ಎಂಬ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಆ ಆಸ್ಪತ್ರೆಯಲ್ಲಿ ನನಗೆ ರಶೀದಿಯನ್ನು ಕೊಟ್ಟಿರುವುದಿಲ್ಲ. ನಿ.ಪಿ.**10** ಎಂದು ಗುರುತು ಆಗಿರುವ ರಶೀದಿಗಳ ಪೈಕಿ ಎರಡನೇ ರಶೀದಿಯಲ್ಲಿ ಇರುವ ಮಾಹಿತಿಯ ಪ್ರಕಾರ ನಾನು ಕೇವಲ **1,950-00** ರೂಪಾಯಿಗಳನ್ನು ಮಾತ್ರ ಪಾವತಿ ಮಾಡಿದ್ದೇನೆ ಎಂದು ಕಂಡು ಬರುತ್ತದೆ ಎಂದರೆ ಸುಳ್ಳು.

11) ವೆಲ್ಲೂರಿನ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ. ನಾನು ನಿಯಮಿತವಾಗಿ ಮುಂದುವರೆದ ಚಿಕಿತ್ಸೆ **(followup treatment)** ಅನ್ನು ಪಡೆದಿದ್ದೇನೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಆ ಬಗ್ಗೆ ಯಾವುದೇ ದಾಖಲೆಗಳನ್ನು ಕೊಡುವುದಿಲ್ಲ.

12) ನನ್ನನ್ನು ವೆಲ್ಲೂರಿನ ಆಸ್ಪತ್ರೆಯಿಂದ ಬಿಡುಗಡೆ **(discharge)** ಮಾಡುವ ವೇಳೆಗೆ ನನಗೆ ಆಗಿದ್ದ ಎಲ್ಲಾ ಗಾಯಗಳು ಸಂಪೂರ್ಣವಾಗಿ ಗುಣ ಆಗಿದ್ದವು ಮತ್ತು ನನಗೆ ಯಾವುದೇ ತೊಂದರೆಗಳು

ಇರಲಿಲ್ಲ ಎಂದರೆ ಸುಳ್ಳು. ನಾನು ನನ್ನ ಚಿಕಿತ್ಸೆಗಾಗಿ ಮತ್ತು ಓಡಾಟ ಮತ್ತು ಇತರೆ ಖರ್ಚುಗಳಿಗಾಗಿ **2** ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

13) ನಾನು **B.Sc., (computer science)** ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ, ಆದರೆ ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

14) ಅಪಘಾತಕ್ಕಿಂತ ಮೊದಲು ನಾನು ಎಸ್.ಎಸ್. ಎಂಟರ್ ಪ್ರೈಸಸ್ ಎಂಬ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆನು ಮತ್ತು ನನಗೆ ಒಂದು ತಿಂಗಳಿಗೆ **18** ಸಾವಿರ ರೂಪಾಯಿ ಸಂಬಳ ಬರುತ್ತಿತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

15) ಅಪಘಾತಕ್ಕಿಂತ ಮೊದಲು ನಾನು ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಮತ್ತು ನಾನು ಓಡಾಡಿಕೊಂಡು ಇದ್ದೆನು ಎಂದರೆ ಸುಳ್ಳು. ನಾನು ಈ ದಿನ ಊರುಗೋಲು ಹಿಡಿದುಕೊಂಡು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಮತ್ತು ನಿಂತುಕೊಂಡೆ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ.

16) ಸದರಿ ಅಪಘಾತದಲ್ಲಿ ನನಗೆ ಆಗಿರುವಂತಹ ಗಾಯಗಳ ಕಾರಣದಿಂದ ನನ್ನ ಮದುವೆ ಆಗುವುದಿಲ್ಲ ಮತ್ತು ಮದುವೆ ಆಗುವುದು ಕಷ್ಟ ಎಂಬುದಾಗಿ ವೈದ್ಯರು ನನಗೆ ಬರವಣಿಗೆಯಲ್ಲಿ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

17) **TN-43-X-9939** ಸಂಖ್ಯೆಯ ಕಾರಿನ ಚಾಲಕನ ವಿರುದ್ಧ ಆಗಿರುವಂತಹ ಕ್ರಿಮಿನಲ್ ಪ್ರಕರಣದಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ.

18) **20.05.2002** ನನ್ನ ಜನ್ಮ ದಿನಾಂಕ ಆಗಿದೆ. ನಾನು ಚಿಕ್ಕ ವಯಸ್ಸಿನ ಹುಡುಗ ಆಗಿದ್ದೇನೆ ಮತ್ತು ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಉಂಟಾಗಿರುವುದಿಲ್ಲ ಮತ್ತು ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಮತ್ತು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು

ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.